[MR. DEPUTY SPEAKER in the Chair.]

STARRED QUESTIONS

(to which oral answers were given)

Relief works in Mysore District

91. Sri M. BASAVARAJU (Krishnarajanagar).—

Will the Minister for Revenue and Forests be pleased to state :—

(*a*) the extent of relief work undertaken during the years 1965-66 and 1966-67 in the drought affected areas of Mysore district (Village and Talukwise figure may kindly be given);

(*b*) the amount sanctioned for drought and famine relief during 1965-66 and 1966-67 and the amount actually spent during the above period in the above district (Talukwise and Villagewise information may be given);

(*c*) the taluks which have not utilised the amount so sanctioned in full and allowed to lapse and the reasons for the same;

(*d*) whether they are aware that relief work has not started in time in a number of places and this has affected the people of drought affected areas in spit of Government sanction of amount;

(*e*) what measures Government propose to adopt to ensure that relief work is administered effectively and efficiently in future; and that relief reaches actually for those to whom it is meant?

A.—Sri B. RACHAIAH (Minister for Revenue and Forests).—

(*a*) Relief works to the extent of Rs. 1,35,470 and Rs. 7,20,818 were undertaken during the years 1965-66 and 1966-67 respectively; Talukwise and villagewise details will be collected and placed on the Table of the House.

(*b*)

Year	*Amount sanctioned*	*Amount actually spent*
1965-66	2,45,000	1,42,137·00
1966-67	10,73,100	8,05,108·00

Talukwise and Villagewise details will be collected and placed on the Table of the House.

(*c*) Necessary details will be collected and placed on the Table of the House.

(*d*) No.

(*e*) Relief works were effectively and efficiently administered and relief actually reached those for whom it was meant. Similar action will be taken in future also.

ಶ್ರೀ ಎಂ. ಬಸವರಾಜು.—ಸ್ವಾಮಿ, ಈ ಪಟ್ಟಿಯಲ್ಲಿ ಸುಮಾರು ಒಂಭತ್ತು ಲಕ್ಷ ರೂಪಾಯಿ ಕ್ಷಾಮ ಪರಿಹಾರ ಕಾಮಗಾರಿಗಳಿಗೆ ಕೊಟ್ಟಿದೆ ಎಂದು ಹೇಳಿದೆ. ಹಾಗೆಯೇ ತಾಲ್ಲೂಕ ಬೋರ್ಡುಗಳಿಗೆ ಐ. ಪಿ. ಸೆಟ್ಸ್ ತೆಗೆದುಕೊಳ್ಳುವುದಕ್ಕೆ ಕೊಟ್ಟಿರುವಂತಹ ಹಣ ಇದರಲ್ಲಿ ಸೇರಿಸಿದೆ ಅಲ್ಲವೇ ?

† ಶ್ರೀ ಬಿ. ರಾಚಯ್ಯ.—ಹೌದು.

ಶ್ರೀ ಎಂ. ಬಸವರಾಜು.—ತಾಲ್ಲೂಕ ಬೋರ್ಡುಗಳಿಗೆ ಒದಗಿಸಿರುವ ಹಣದಲ್ಲಿ ಐ. ಪಿ. ಸೆಟ್ಸ್ ಕೊಂಡುಕೊಳ್ಳುವುದರಲ್ಲಿ ಅಕ್ರಮ ವ್ಯವಹಾರ ನಡೆದಿದೆ ಎಂದು ಸರಕಾರಕ್ಕೆ ಜಿಲ್ಲಾಧಿಕಾರಿಗಳಿಂದ ಏನಾದರೂ ದೂರು ಬಂದಿದೆಯೇ ?

ಶ್ರೀ ಬಿ. ರಾಚಯ್ಯ—ದೂರು ಬಂದಿಲ್ಲ.

ಶ್ರೀ ಎಂ. ನಾಗಪ್ಪ —ಪರಿಹಾರ ಕಾಮಗಾರಿಯಲ್ಲಿ ಸೇರಿದ 60 ರಷ್ಟು ಕೂಲಿ ಕೊಡುತ್ತೀರಿ. ಸಂಪೂರ್ಣ ಕೂಲಿ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹೆಚ್ಚಿಗೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಸ್. ಜಗಜ್ಯೋತಿ ನಾಗರಾಜಯ್ಯ.—ಪರಿಹಾರ ಕಾಮಗಾರಿಗಳನ್ನು ಮಾಡುವಾಗ ಒಂದು ನೀತಿ ಇಟ್ಟುಕೊಂಡು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಒಂದು ನೀತಿ ಇಟ್ಟುಕೊಂಡು ಕೊಡುತ್ತಿದ್ದೇವೆ.

ಶ್ರೀ ಎಂ. ಬಸವರಾಜು.—ಸ್ವಾಮಿ, ರಿಲೀಫ್ ವರ್ಕ್ಸ್‌ಗೆ ಇಷ್ಟು ಹಣ ಖರ್ಚು ಮಾಡುತ್ತಿದ್ದರೂ ಕೂಡ ಪೂರ್ತಿಯಾಗಿ ಕೆಲಸವಾಗದೆ ಪ್ಯಾಚ್ ವರ್ಕ್ ಆಗುತ್ತಿರುವುದರಿಂದ ಹಣ ದಾನ ಕೊಟ್ಟ ಹಾಗೆ ಆಗುತ್ತದೆ. ಸರಿಯಾಗಿ ಉಪಯೋಗವಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ನೀರಾವರಿ ಕೆಲಸ ಕಾರ್ಯಗಳಿಗೆ ಕೆಲಸ ಪೂರ್ತಿ ಮಾಡಲು ಹೆಚ್ಚು ಹಣ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದಲ್ಲಿ ಕೆಲವು ಪ್ರದೇಶ ಕ್ಷಾಮ ಪ್ರದೇಶವಾಗಿದೆ. ಅಧಿಕಾರಿಗಳು ತಿಳಿಸಿದಮೇರೆ ಅದು ಕ್ಷಾಮ ಪ್ರದೇಶ ಎಂದು ಸಾರಿ ಪರಿಹಾರ ಕೊಡುತ್ತೀರಿ. ಯಾವುದೇ ಭಾಗದ ಜನರಿಂದ ದೂರು ಬಂದಾಗ್ಗೆ ಒಂದು ಸಮಿತಿ ಅಲ್ಲಿಗೆ ಹೋಗಿ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಅದು ಕ್ಷಾಮ ಪ್ರದೇಶ ಎಂದು ಸಾರುವುದಕ್ಕೆ ಯೋಚನೆ ಮಾಡುತ್ತೀರಾ ? ಪರಿಹಾರ ಕಾಮಗಾರಿ ಕೊಡುವುದಕ್ಕೆ ಗಮನ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಅಧಿಕಾರಿಗಳು ಕೊಟ್ಟಂಥ ವರದಿ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಖಾನಗಿ ಜನರಿಂದ ರೈತ ಪ್ರತಿನಿಧಿಗಳಿಂದ ಸರಕಾರಕ್ಕೆ ತಿಳಿಸಿದಾಗ್ಗೆ ಬೇರೆ ರೂಪದಲ್ಲಿ ವಿಷಯ ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಕೆಲವುಸಾರಿ ನಾವೇ ಖುದ್ದಾಗಿ ಹೋಗಿ ನೋಡಿ ಪರಿಹಾರ ಒದಗಿಸಲು ಪ್ರಯತ್ನ ಮಾಡುತ್ತೇವೆ. ಅಲ್ಲಿಯ ಕಷ್ಟ ನೋಡಿ ರಿಲೀಫ್ ವರ್ಕ್ಸ್ ತೆಗೆದುಕೊಳ್ಳಲು ತಿಳಿಸಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ಅನುಭವದಲ್ಲಿ ಅನೇಕ ಕಡೆ ಕ್ಷಾಮ ಪರಿಹಾರ ಪಜೆನ್ಸಿ ಮೂಲಕ ಹಣ ದುರುಪಯೋಗವಾಗಿರುವುದು ಕಂಡುಬಂದಿರುವುದರಿಂದ ಎಂಜಿನಿಯರಿಂಗ್ ಇಲಾಖೆಯ ಅಡಳಿತದಲ್ಲಿ ಕೆಲಸ ನಡೆಸುವುದಕ್ಕೆ ಸರಕಾರ ಯೋಚನೆ ಮಾಡಿದೆಯೇ ?

ಶ್ರೀ ಬಿ. ರಾಚಯ್ಯ.—ಹಣ ದುರುಪಯೋಗವಾಗಿದೆ ಎಂದು ಸರಕಾರಕ್ಕೆ ಪುಕಾರು ಬಂದಿಲ್ಲ. ರೂಲ್ಸ್ ಪ್ರಕಾರ ರಿಲೀಫ್ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ.

ಶ್ರೀ ಎಂ. ಬಸವರಾಜು.—ದೂರು ಬಂದಿಲ್ಲ ಎಂದು ಹೇಳಿದಿರಿ. ದೂರು ತಮ್ಮ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ವಿಚಾರಣೆ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರವೆನ್ಯೂ ಇಲಾಖೆಯ ತಾಲ್ಲೂಕ ಬೋರ್ಡ ಏಜೆನ್ಸಿ ಮೂಲಕ ಪರಿಹಾರ ಕಾಮಗಾರಿ ಮಾಡಿದರೆ, ಅದು ಕ್ರಮವಾಗಿ ಇರುವುದಿಲ್ಲ ಎಂದು ತಿಳಿದು ಸರಕಾರ ಪಿ. ಡಬ್ಲ್ಯೂ. ಡಿ. ಇಲಾಖೆಯ ಎಂಜಿನಿಯರಿಂಗ್ ಅಡಳಿತದಲ್ಲಿ ನಡೆಸುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಕ್ಷಾಮ ಪರಿಹಾರ ಕಾಮಗಾರಿಯಲ್ಲಿ ಜನರಿಗೆ ಕೂಲಿ ಒದಗಿಸಿಕೊಡಬೇಕಾಗುತ್ತದೆ. ಪಿ. ಡಬ್ಲ್ಯೂ. ಡಿ. Schedule of Rates ಪ್ರಕಾರ ಟೆಂಡರ್ಸ್ ಕರೆಯುಬೇಕು

ಮಧ್ಯವರ್ತಿಯಾದವರಿಗೆ ಲಾಭವಾಗಬೇಕು ಅಂದರೆ ಕಷ್ಟ ಜಾಸ್ತಿಯಾಗುತ್ತದೆ. ಪರಿಹಾರ ಕಮಿಗಾರಿಯಲ್ಲಿ ಕೊಡುವ ರೇಟ್ಸ್ ಪಿ. ಡಬ್ಲ್ಯೂ. ಡಿ. ಯವರು ಒಪ್ಪಿಕೊಂಡರೆ ಈ ಪರಿಹಾರ ಕಾಮಗಾರಿ ಹಣವನ್ನು ಆ ಇಲಾಖೆಗೆ ವರ್ಗಾಯಿಸುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ತಾಲ್ಲೂಕ ಬೋರ್ಡ್ ನಿರ್ಣಯ ಮಾಡಿ ಪಿ. ಡಬ್ಲ್ಯೂ. ಡಿ. ಕೆಲಸ ಮಾಡಬೇಕು ಎಂದು ತೀರ್ಮಾನ ಮಾಡಿರುತ್ತಾರೆ. ಅದೇ ರೀತಿ ಜಲ್ಲಾ ಅಭಿವೃದ್ಧಿ ಮಂಡಲಿಯಿಂದ ತೀರ್ಮಾನವಾಗಿ ಬಂದರೆ ಅವರು ಇದನ್ನು ಮಾಡುತ್ತಾರೆಯೇ ?

ಶ್ರೀ ಬಿ. ರಾಜಯ್ಯ.—ಆಯಾಯ ತಾಲ್ಲೂಕಿನಲ್ಲಿ ಒಂದು ರಿಲೀಫ್ ಕಮಿಟಿ ಎಂದು ಮಾಡಿದ್ದೇನೆ. ಅದಕ್ಕೆ ಅಸಿಸ್ಟೆಂಟ್ ಕಮಿಷನರ್‌ರು ಚೇರಮನ್ ಆಗಿರುತ್ತಾರೆ. ಆ ಕಮಿಟಿಯಲ್ಲಿ ಶಾಸನ ಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಅಧ್ಯಕ್ಷರು ಹಾಗು ಕೆಲವು ಅಧಿಕಾರಿಗಳು ಸೇರಿ ಕೆಲಸ ನಡೆಸಬೇಕು ಎಂದು ಮಾಡಿದ್ದೇವೆ. ಇಂಥ ಸಂದರ್ಭದಲ್ಲಿ ಪಿ. ಡಬ್ಲ್ಯೂ. ಇಲಾಖೆಯಲ್ಲಿ ನೀರಾವರಿ ಕೆಲಸ ಕಾರ್ಯಗಳನ್ನು ಅವರೇ ಮಾಡುತ್ತಾರೆ. ಈ ಪರಿಹಾರ ಕಾಮಗಾರಿ ಕೆಲಸ ತೀವ್ರವಾಗಿ ನಡೆಯಬೇಕೆಂದು ಹೀಗೆ ಹಂಚಿಕೆ ಮಾಡಿ ತಾಲ್ಲೂಕ ಮಟ್ಟದಲ್ಲಿ ನಡೆಯುತ್ತಿದೆ.

ಶ್ರೀ ಅಜೀಜ್‌ಸೇಠ್.—ಒಂದು ನಾನ್ ಆಫೀಷಿಯರ್ ಕಮಿಟಿ ಮಾಡಿ ರಿಲೀಫ್ ವರ್ಕ್ಸ್ ಸುಪರವೈಜ್ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ? ಕೆಳ ಮಟ್ಟದಲ್ಲಿ ಅಧಿಕಾರ ಡೀಸೆಂಟ್ರಲೈಜೇಷನ್ ಮಾಡಿ ಕಾರ್ಯಗತ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಬಿ. ರಾಜಯ್ಯ.—ತಾಲ್ಲೂಕ ಮಟ್ಟದಲ್ಲಿ ಜನಗಳಿಂದ ಕೂಡಿದಂಥ ಒಂದು ರಿಲೀಫ್ ಕಮಿಟಿ ಮಾಡಿದ್ದೇವೆಂದು ಹೇಳಿದ್ದೇನೆ.

Railway line from Gadag to Wadi

92. Sri RAJA PID NAIK (Shorapur).—

Will the Minister for Public Works and Electricity be pleased to state :—

(*a*) whether the Government is aware of a proposal to lay a Railway line from Wadi to Gadag ;

(*b*) if so, the steps taken by the State Government to pursue the matter with the Centre ?

A.—Sri VEERENDRA PATIL (Minister for Public Works).—

(*a*) Yes.

(*b*) The Ministry of Railways have been urged to take up the new Railway line.

Sri C. K. RAJAIAH SHETTY.—May I know when the last Communication was made to the Central Government and what are the reactions ?

† Sri VEERENDRA PATIL.—We wrote to the Government of India several times. But we have not heard anything so far.

Sri RAJA PID NAIK.—May I know whether any survey has been conducted in this behalf Sir ?

Sri VEERENDRA PATIL.—Survey has been conducted in the year 1909 and 1910 and no survey has been conducted afterwards.